**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ಸಂಖ್ಯೆ:9127/2022**

ಫಿರ್ಯಾದಿ : ಎನ್.ಕೆ.ಸುರೇಶ್ ಬಿನ್ ವಿ.ಕೃಷ್ಣಸ್ವಾಮಿ, 38 ವರ್ಷ,
ನಂ:-ಗಾಣಿಗರ ಕಲ್ಯಾಣ ಮಂಟಪ ಎದುರು,
ಚಾಮಲಾಪುರ ಬೀದಿ, ನಂಜನಗೂಡು ಟೌನ್.

ವಿರುದ್ಧ

ಆರೋಪಿ : ಎಂ.ರವೀಶ್ ಬಿನ್ ಮರಿಸ್ವಾಮಿ, 32 ವರ್ಷ,
ನಂ:- ಮಾರಿಗುಡಿ, ಲಿಂಗಾಯಿತರ ಬೀದಿ,
ದೇಬೂರು ಗ್ರಾಮ, ಕಸಬಾ ಹೋಬಳಿ,
ನಂಜನಗೂಡು ತಾ.

: ಆರೋಪಣೆ :

ಶ್ರೀಮತಿ ಶಶಿಕಲಾ ಜಿ, ಬಿ.ಎ, ಎಲ್‌ಎಲ್‌ಬಿ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಕಾನೂನುಬದ್ಧ ಇತರೆ ವ್ಯವಹಾರಗಳಿಗೆ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರನ್ನು ದಿ.05-09-2022 ರಂದು ಭೇಟಿ ಮಾಡಿ ರೂ.3,00,000/-ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಿ, ಸದರಿ ಮೊಬಲಗನ್ನು 01 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿದ್ದು, ಒಂದು ತಿಂಗಳ ನಂತರ ಪಿರ್ಯಾದಿದಾರರು ನಿಮ್ಮನ್ನು ಭೇಟಿ ಮಾಡಿ ಸಾಲದ ಹಣವನ್ನು ಮರುಪಾವತಿಸುವಂತೆ ಹಲವಾಗಿ ಬಾರಿ ಮನವಿ ಮಾಡಿಕೊಂಡಿದ್ದರು ಸಹ ಆರೋಪಿಯಾದ ನೀವು ಹಣವನ್ನು ಪಾವತಿಸಿರುವುದಿಲ್ಲ, ನಂತರ ಸದರಿ ಹಣದ ಮರು ಪಾವತಿಗಾಗಿ ಆರೋಪಿಯಾದ ನೀವು ಉಳಿತಾಯ ಖಾತೆ ಹೊಂದಿರುವ ಕೆನರಾ ಬ್ಯಾಂಕ್ ನಂಜನಗೂಡು ಶಾಖೆಯ ಚಕ್ ನಂ:536099 ಗೆ ರೂ.3,00,000/-ಗಳನ್ನು ದಿನಾಂಕ:10.10.2022 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ಕೆನರಾ ಬ್ಯಾಂಕ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ

ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ "Account Closed' ಎಂಬ ಹಿಂಬರಹದೊಂದಿಗೆ ದಿಃ19.10.2022 ರಂದು ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.*16.11.2022* ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಖುದ್ದು ಜಾರಿಯಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ.*138* ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

*ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?*

*ಉತ್ತರ :* ಹೌದು

*ಪ್ರಶ್ನೆ-2 : ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ?* ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?
*ಉತ್ತರ :* ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

*(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ:24.04.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).*

ಸಹಿ/-
*2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.*
*ನಂಜನಗೂಡು*